

ಗುಣದವರಾಗಿದ್ದರೆ ಇದರ ವಿರುದ್ಧದ ಪ್ರತಿಭಟನೆಯಾಗಿಯೂ ಅಫೇರ್ ಹುಟ್ಟಿಕೊಳ್ಳುತ್ತದೆ.

★ ಪಾಲಕರ ಪ್ರಭಾವ: ಪಾಲಕರಲ್ಲೊಬ್ಬರಿಗೆ ವಿವಾಹೇತರ ಸಂಬಂಧವಿದ್ದರೆ ಅಂಥವರ ಮಕ್ಕಳಿಗೆ ಇದು ತಪ್ಪು ಅನಿಸದೇ ಹೋಗುವ ಸಾಧ್ಯತೆ ಇರುತ್ತದೆ. ಇವರು ದೊಡ್ಡವರಾದ ಮೇಲೆ ವಿವಾಹೇತರ ಸಂಬಂಧಗಳನ್ನು ಇಟ್ಟುಕೊಳ್ಳುವುದು ಅಪರಾಧವಲ್ಲ ಎಂದುಕೊಂಡು ಇದರತ್ತ ವಾಲುತ್ತಾರೆ. ಇಂಥ ಎಲ್ಲ ಪಾಲಕರ ಮಕ್ಕಳು ಹೀಗಾಗುತ್ತಾರೆ ಎಂದೇನೂ ಇಲ್ಲ.

★ಸ್ನೇಹಿತರ ಪ್ರಭಾವ: ಸ್ನೇಹಿತರ ನಡವಳಿಕೆಗಳಿಂದ ಪ್ರಭಾವಿತರಾಗುವವರು ಸಾಕಷ್ಟು ಜನರಿರುತ್ತಾರೆ. ಅಫೇರ್ ಇಟ್ಟುಕೊಳ್ಳುವ ಸ್ನೇಹಿತರ ಗುಂಪಿದ್ದರೆ ತಾವು ಹೀಗೆ ಅಫೇರ್ ಇಟ್ಟುಕೊಳ್ಳದಿದ್ದರೆ ತಮ್ಮ ಗೌರವ ಕಡಿಮೆ ಆಗುತ್ತದೆ, ಗುಂಪಿನಿಂದ ಹೊರಗಿನವರಾಗುತ್ತೇವೆ ಎಂಬ ಭಯದಿಂದಲೂ ವಿವಾಹೇತರ ಸಂಬಂಧ ಕಟ್ಟಿಕೊಳ್ಳುವವರೂ ಇದ್ದಾರೆ.

★ ಸೇಡು ತೀರಿಸಿಕೊಳ್ಳಲು: ತನ್ನ ಸಂಗಾತಿ ಬೇರೊಬ್ಬರ ಜತೆ ಸಂಬಂಧ ಇಟ್ಟುಕೊಂಡಿದ್ದಾನೆಂದು ತಿಳಿದು ಸೇಡು ತೀರಿಸಿಕೊಳ್ಳಲು ತಾನೂ ಅಫೇರ್ ಇಟ್ಟುಕೊಳ್ಳುವುದು ಕೆಲವು ಸಲ ಕಂಡು ಬರುತ್ತದೆ. ಸಂಗಾತಿ ತನ್ನನ್ನು ಕೆಟ್ಟದಾಗಿ ನಡೆಸಿಕೊಳ್ಳುವುದೂ ಅಫೇರ್ ಇಟ್ಟುಕೊಳ್ಳಲು ಕಾರಣವಾಗಬಹುದು.

★ ಸ್ನೇಹ ಸಂಬಂಧ: ಮೊದಲಿಗೆ ಸ್ನೇಹದಲ್ಲಿ ಪ್ರಾರಂಭವಾಗುವ ಹೆಣ್ಣು ಗಂಡಿನ ಸಂಬಂಧ ಯಾವುದಾದರೊಂದು ದುರ್ಬಲ ಗಳಿಗೆಯಲ್ಲಿ ದೈಹಿಕ ಸಂಬಂಧವಾಗಿ ಬಿಡುವ ಅಪಾಯವಿರುತ್ತದೆ. ಪರಿಶುದ್ಧ ಸ್ನೇಹ ಎಂದುಕೊಂಡಾಗಲೂ ಕೆಲವು ಸಲ ಈ ಗೆಳೆತನದ ರೇಖೆಯನ್ನು ದುರ್ಬಲ ಗಳಿಗೆಯಲ್ಲಿ ದಾಟುವ ಸ್ನೇಹಿತರು ಅಫೇರ್ ಇಟ್ಟುಕೊಳ್ಳುವಂತಾಗುತ್ತದೆ.

★ ಜನ್ಮ ಜನ್ಮಾಂತರದ ಅನುಬಂಧ: ಕೆಲವು ಬಾರಿ ಒಬ್ಬರನ್ನೊಬ್ಬರು ದೈಹಿಕ ಸಂಬಂಧ ಇಲ್ಲದೆಯೂ ಪ್ರೀತಿಸಬಹುದು. ಇವರು ತಮ್ಮ ಪ್ರೀತಿ ಬಹಳ ಪರಿಶುದ್ಧವಾದದ್ದು, ಜನ್ಮ ಜನ್ಮಾಂತರದ್ದು ಎಂದು ತಿಳಿದಿರುತ್ತಾರೆ. ಆದರೆ ಪತಿ/ಪತಿ ತನ್ನ ಸಂಗಾತಿ ಇನ್ನೊಬ್ಬರ ಜತೆ ಹೀಗೆ ಅಪರಿಮಿತ ಪ್ರೀತಿ ಹೊಂದಿದ್ದಾರೆ ಎಂದು ತಿಳಿದರೆ ದೈಹಿಕ ಸಂಪರ್ಕ ಇರಲಿ, ಇರದೇ ಇರಲಿ ಅದನ್ನು ಒಪ್ಪಿಕೊಳ್ಳುವುದಿಲ್ಲ. ಹಾಗೆ ನೋಡಿದರೆ ತನ್ನ ಸಂಗಾತಿ ಬೇರೊಬ್ಬರನ್ನು ಭಾವನಾತ್ಮಕವಾಗಿ ಹಚ್ಚಿಕೊಳ್ಳುವುದಕ್ಕಿಂತ ಅವರ ಜತೆ ಒಂದು ರಾತ್ರಿ ಕಳೆದು ಮರೆತುಬಿಡುವುದೇ ಮಿಗಿಲು ಎಂದು ಭಾವಿಸುತ್ತಾರೆ.

ವಿವಾಹೇತರ ಸಂಬಂಧಕ್ಕೆ ಬೇರೆ ಬೇರೆ ಕಾರಣಗಳಿರಬಹುದು, ಆದರೆ ಅವುಗಳನ್ನು ಸೂಕ್ಷ್ಮವಾಗಿ ನಿರ್ವಹಿಸಬೇಕಾಗುತ್ತದೆ. ಅಫೇರ್ ಇದೆ ಎಂದರೆ ಅದರರ್ಥ ವಿವಾಹ ಬಂಧ ಮುಗಿಯಿತು ಎಂದಲ್ಲ. ಹಲವು ದಂಪತಿ ಅಫೇರ್ ಅನ್ನು ಎಚ್ಚರದ ಕರೆಗಂಟೆ ಎಂದು ಪರಿಗಣಿಸಿ, ಕಾರಣಗಳನ್ನು ಹುಡುಕಿ ಸರಿಪಡಿಸಿಕೊಂಡು ಉತ್ತಮ ವಿವಾಹ ಜೀವನ ನಡೆಸುತ್ತಿದ್ದಾರೆ. ಆದರೆ ಕೆಲವು ದಾಂಪತ್ಯಗಳು ದುರ್ಬಲ ಗಳಿಗೆಯ ಅಫೇರ್ ಕಾರಣಕ್ಕೆ ಮುರಿದು ಬಿದ್ದಿವೆ. ಬಹುತೇಕ ಸಂದರ್ಭಗಳಲ್ಲಿ ಅಫೇರ್‌ಗೆ ಕಾರಣ ದಾಂಪತ್ಯ ಜೀವನದಲ್ಲಿನ ತೊಂದರೆ ಕಾರಣವಾಗಿರುತ್ತದೆ. ಗಂಡ ಹೆಂಡತಿ ಕುಳಿತು ಈ ತೊಂದರೆ ನಿವಾರಿಸಿಕೊಂಡು ಸುಮಧುರ ಜೀವನ ಕಟ್ಟಿಕೊಳ್ಳುವುದು ಒಳಿತು.

ಇಲ್ಲದ ರಗಳೆಗೆ ಕಾರಣವಾಗುವ ವಿವಾಹೇತರ ಸಂಬಂಧ ಬೆಳೆಸುವ ಮುನ್ನ ಈ ಕೆಳಗಿನದ್ದನ್ನು ಸ್ವಲ್ಪ ನೆನಪಿಡಿ.

* ವಿವಾಹೇತರ ಸಂಬಂಧಗಳನ್ನು ಕಡೆಗೆ ನಿಭಾಯಿಸುವುದಕ್ಕಿಂತ ಅವು ಆಗದಂತೆ ತಡೆಯುವುದೇ ಲಾಭದಾಯಕ.

* ವಿವಾಹೇತರ ಸಂಬಂಧಗಳನ್ನು ಎಷ್ಟೇ ಹುಷಾರಾಗಿದ್ದರೂ ಮುಚ್ಚಿಡಲು ಸಾಧ್ಯವಿಲ್ಲ. ಇನ್‌ಬಾಕ್ಸ್‌ನಲ್ಲಿ ಮೆಸೇಜ್ ಅಳಿಸಿ ಹಾಕಿದ ಮಾತ್ರಕ್ಕೆ ಪತಿ/ಪತ್ನಿಗೆ ಸಂಬಂಧದ ಸುಳಿವು ಸಿಗದು ಎಂಬ ಭ್ರಮೆ ಬೇಡ.

* ಪತಿ/ಪತ್ನಿ ಬಿಟ್ಟು ಬೇರೆ ಸ್ತ್ರೀ/ ಪುರುಷರತ್ತ ಆಕರ್ಷಿತರಾಗುವುದು ಸಹಜ. ಆದರೆ ಹಾಗೆಂದ ಮಾತ್ರಕ್ಕೆ ಸಂಬಂಧ ಬೆಳೆಸಬೇಕು ಎಂದು ಅರ್ಥವಲ್ಲ.

* ಮದುವೆಯಾಗಿ ಹಲವು ವರ್ಷಗಳ ನಂತರ ಪತಿ/ಪತ್ನಿಗಿಂತ ಬೇರೆಯವರೇ ಹೆಚ್ಚು ಚೆಂದ ಎನಿಸುವುದು ಸಾಮಾನ್ಯ.

* ನಿಮ್ಮ ಆತ್ಮೀಯ ಮಿತ್ರನಿಗೆ ವಿವಾಹಬಾಹಿರ ಸಂಬಂಧ ಇದೆ ಎಂದ ಮಾತ್ರಕ್ಕೆ ನೀವು ಇಟ್ಟುಕೊಳ್ಳಬೇಕು ಎಂದು ಅರ್ಥವಲ್ಲ.

* ಬೇರೆಯವರೆಲ್ಲ ಅಫೇರ್ ಇಟ್ಟುಕೊಂಡಿದ್ದಾರೆ ಎಂದರೆ ನೀವು ಇಟ್ಟುಕೊಳ್ಳಬೇಕು ಎಂದಲ್ಲ.

* ಯಾರು ಏನೇ ಹೇಳಿದರೂ ಬಹ ಪತ್ನಿತ್ವ ಎಂಬುದು ಮನುಷ್ಯನ ಸಹಜ ಸ್ವಭಾವವಲ್ಲ ನೆನಪಿರಲಿ.

* ನಿಮ್ಮ ಮದುವೆಯಲ್ಲಿ ತೊಂದರೆ ಇದ್ದರೆ ಅದೇನೆಂದು ತಿಳಿದು ಸರಿಪಡಿಸಿಕೊಳ್ಳಿ. ಅಫೇರ್ ಇಟ್ಟುಕೊಂಡರೆ ಅದು ಸರಿಯಾಗದು.

* ಅಫೇರ್ ತಡೆಯುವ ಎಲ್ಲ ಪ್ರಯತ್ನಗಳು ವಿಫಲವಾದರೆ ಮಾನಸಿಕ ತಜ್ಞರ ಮಾರ್ಗದರ್ಶನ ಪಡೆಯಿರಿ.